(ಇಂದು ದಿನಾಂಕಃ 20-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು ಶ್ರೀ ಆರ್ ಎಸ ಕೆ ಎದುರುದಾರರ ಪರ ವಕೀಲರುಃ**

**1.** ಮೃತ ಆದೇಶ ಕುಮಾರ ನನ್ನ ಮಗ. ಅಪಘಾತದ ಬಗ್ಗೆ ದೂರನ್ನು ನಾನೇ ಕೊಟ್ಟಿರುತ್ತೆನೆ. ದೂರಿನಲ್ಲಿ ನನ್ನ ಮಗ ಶಾಲೆ ಕಲಿಯುತ್ತಿದ್ದನು ಎಂದು ಬರೆದಿದ್ದೇನೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಮಗ ಶಾಲೆ ಕಲಿಯುತ್ತಿದ್ದನು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ನನ್ನ ಮಗ ಶಾಲೆ ಕಲಿತ ಬಗ್ಗೆ ದಾಖಲೆಗಳು ನನ್ನ ಮನೆಯಲ್ಲಿ ಇರುತ್ತವೆ. ನನ್ನ ಮಗ ಶಾಲೆ ಕಲಿತ ಬಗ್ಗೆ ದಾಖಲೆಗಳು ನನ್ನ ಮನೆಯಲ್ಲಿ ಇರುತ್ತವೆ ಆದರೆ ಅದು ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನನಗೆ ಐದು ಜನ ಮಕ್ಕಳು. ಐದು ಜನ ಮಕ್ಕಳು ಶಾಲೆ ಕಲಿತಿರುತ್ತಾರೆ. ನನ್ನ ಎಲ್ಲಾ ಮಕ್ಕಳು ನನ್ನಿಂದ ಬೇರೆ ಆಗಿರುತ್ತಾರೆ. ನನ್ನ 4 ಜನ ಮಕ್ಕಳ ಮದುವೆ ಆಗಿರುತ್ತದೆ. ಮೃತ ಆದೇಶ ಕುಮಾರರವರ ಮದುವೆ ಆಗಿರಲಿಲ್ಲ. ನನ್ನ ಮಗ ದ್ವಿಚಕ್ರ ವಾಹನದ ಮೇಲೆ ಕುಳಿತುಕೊಂಡು ಹೋಗುತ್ತಿದ್ದಾಗ ಅಪಘಾತ ಅಗಿರುತ್ತದೆ. ಆ ಗಾಡಿ ನನ್ನ ಮಗನ ಗಾಡಿ ಇತ್ತು. ಅದು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ, ಅದರ ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಅದು ಹಿರೊಹೊಂಡಾ ಇತ್ತು. ನನ್ನ ಮಗನಿಗೆ ಅಪಘಾತ ಆದಾಗ 21 ವರ್ಷ ಆಗಿತ್ತು.

2. ಆ ಗಾಡಿ ನಡೆಸಲು ನನ್ನ ಮಗನ ಹತ್ತಿರ ಲೈಸೆನ್ಸ ಇತ್ತಾ ಎಂದರೆ ಸಾಕ್ಷಿ ಅವನ ಜೊತೆ ಅವನ ಬ್ಯಾಗಿನಲ್ಲಿ ಇತ್ತು ಎಂದು ಹೇಳುತ್ತಾರೆ. ನನ್ನ ಮಗ ಲೈಸೆನ್ಸ ಅನ್ನು ಕಮಲಾಪುರದಲ್ಲಿ ತೆಗೆದಿರುತ್ತಾನೆ. ನನ್ನ ಮಗ ಲೈಸೆನ್ಸ ಪ್ರತಿಯನ್ನು ನಾನು ಪೋಲಿಸ ಠಾಣೆಗೆ ಕೊಟ್ಟಿಲ್ಲ. ಸಾಕ್ಷಿ ಮುಂದುವೆರೆದು ನನಗೆ ಇದು ಗೊತ್ತಾಗುವುದಿಲ್ಲ ಎಂದು

ಹೇಳುತ್ತಾರೆ. ನಾನು ಪೋಲಿಸ ಠಾಣೆಯಲ್ಲಿ ಗಾಡಿಯನ್ನು ಬಿಡಿಸಿಕೊಂಡು ಬರುವಾಗ ಸಂದೀಪನ ಹೆಸರಿನಲ್ಲಿ ಇರುವ ಲೈಸೆನ್ಸ ಮತ್ತು ಇಫಕೊ ಟೋಕಿಯೋ ವಿಮೆ ಕಂಪನಿಯ ಪಾಲಿಸಿಯನ್ನು ಠಾಣೆಯಲ್ಲಿ ಕೊಟ್ಟಿರುತ್ತೇನೆ ಎಂದರೆ ಸರಿ. ದೂರಿನಲ್ಲಿ ಆ ಗಾಡಿ ನಡೆಸಲು ನನ್ನ ಮಗನ ಹತ್ತಿರ ಲೈಸೆನ್ಸ ಇತ್ತು, ಅವನ ಜೊತೆ ಅವನ ಬ್ಯಾಗಿನಲ್ಲಿ ಇತ್ತು ಅದು ನನಗೆ ಸಿಕ್ಕಿಲ್ಲ ಎಂದು ದೂರಿನಲ್ಲಿ ಬರೆಸಿಲ್ಲ.

**ಸಾಕ್ಷಿಗೆ ಸರಿಯಾಗಿ ಅರ್ಥ ಆಗುತ್ತಿಲ್ಲ ಎಂದು ಹೇಳಿದ್ದರಿಂದ ಮುಂದಿನ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.